KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**
**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

-----------------------------------------------------------------------------

State Complainant}: The Public Prosecutor, Chikkamagaluru.,
Sri. I.S. THEJASVI appearing for Sreeraj @ Annaiah

-----------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**S.C. No: 2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೆ. ಸತೀಶ್ | ಪ್ರಾ.ಸಾ.- 14 |
| ತಂದೆ ಹೆಸರು | : | ಶಾಮಣ್ಣ | ಚಾ.ಸಾ.- 23 |
| ವಯಸ್ಸು | : | 61 ವರ್ಷ | |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ | |
| ವಾಸ ಸ್ಥಳ | : | ಚಿಕ್ಕಮಗಳೂರು | |

**ದಿನಾಂಕ: 08-12-2025**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ -ಪಿ.ಪಿ.ಯವರಿಂದಃ**

1. ದಿನಾಂಕಃ 18-11-2019 ರಿಂದ 19-06-2021 ರ ವರೆಗೆ ನಾನು ಜಯಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 18-11-2019 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-22-ಎ.ಎಸ್.ಐ.ಸೂರಪ್ಪರವರಿಂದ ಪಡೆದು ಪರಿಶೀಲಿಸಿ ರುತ್ತೇನೆ. ಅದೇ ದಿನ ಎಫ್.ಎಸ್.ಎಲ್.ನಿಂದ ಬಂದ ನಿ.ಪಿ.16 ಮತ್ತು 17 ರ ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

3. ದಿನಾಂಕಃ 25-11-2019 ರಂದು ಮೃತೆಯ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ವರದಿಯನ್ನು ನೀಡಲು, ಪಿ.ಎಂ. ವರದಿ ಹಾಗೂ ಎಫ್.ಎಸ್.ಎಲ್. ವರದಿಯನ್ನು ಲಗತ್ತಿಸಿ ಮೆಗ್ಗಾನ್ ಆಸ್ಪತ್ರೆ ಶಿವಮೊಗ್ಗ ಇವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ.

4. ದಿನಾಂಕಃ 01-12-2019 ರಂದು ಮೃತೆಯ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ನೀಡಲು, ಕೊಪ್ಪ ಸರ್ಕಾರಿ ಆಸ್ಪತ್ರೆಯಿಂದ ಮೃತೆಯ ಎಂ.ಎಲ್.ಸಿ. ಕೇಸ್ ಶೀಟ್ ದಾಖಲಾತಿಯನ್ನು ನೀಡುವಂತೆ ಕೋರಿ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಕೊಪ್ಪ ಸರ್ಕಾರಿ ಆಸ್ಪತ್ರೆಯ ವೈದ್ಯರು ದಾಖಲಾತಿಗಳನ್ನು ಕೊಡಲು ಬರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ.

5. ನಂತರ, ಚಿಕ್ಕಮಗಳೂರು ಜಿಲ್ಲಾ ಆರೋಗ್ಯ ಅಧಿಕಾರಿಯವರಿಗೆ ದೂರವಾಣಿ ಮೂಲಕ ದಾಖಲಾತಿಗಳ ಬಗ್ಗೆ ವಿಚಾರ ಮಾಡಲಾಗಿ, ಮೃತೆಯ ಎಫ್ ಎಸ್ ಎಲ್ ವರದಿ ಹಾಗೂ ಪಿ ಎಂ ವರದಿಯನ್ನು ನೋಡಿ ಅಭಿಪ್ರಾಯವನ್ನು ಕೊಡಬಹುದು ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.

6. ದಿನಾಂಕಃ 05-05-2020 ರಂದು ಮೆಗ್ಗಾನ್ ಆಸ್ಪತ್ರೆ ಶಿವಮೊಗ್ಗ ಇವರಿಂದ ಮೃತೆಯ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ವರದಿ ಬಂದಿದ್ದು, ಸದರಿ ವರದಿಯನ್ನು ಪರಿಶೀಲಿಸಲಾಗಿ, ನಿ.ಪಿ.25 ರ ಅಂತಿಮ ಅಭಿಪ್ರಾಯ ವರದಿಯಲ್ಲಿ "death was due to septicaemia" ಎಂದು ಇರುತ್ತದೆ. ನಿ.ಪಿ.26 ರ ಅಭಿಪ್ರಾಯ ವರದಿಯಲ್ಲಿ ಮೃತೆಯ ಸಾವು "with the details available, it is not possible to decipher whether the Septicaemia resulted in Miscarriage or miscarriage complicated to Septicaemia" ಎಂದು ಇರುತ್ತದೆ.

7. ನಂತರ ಅದೇ ದಿನ ದಿನಾಂಕಃ 05-05-2020 ರಂದು ಪಿಸಿ-ಧರ್ಮರಾಜ್ ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ-65-ಬಿ ರಂತೆ ನಿ.ಪಿ. 27 ರಂತೆ ದೃಢೀಕರಣ ಪತ್ರವನ್ನು ಪಡೆದಿರುತ್ತೇನೆ.

8. ಆರೋಪಿತನ ವಿರುದ್ಧ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ ಎಸ್ ಟಿ ವಕೀಲರಿಂದಃ</u>**

9. ಚಾಸಾ-22 ರವರಿಂದ ಕಡತವನ್ನು ಪಡೆದ ನಂತರ ಸದರಿ ಕಡತವನ್ನು ಪರಿಶೀಲಿಸಿರುತ್ತೇನೆ. ಸದರಿ ಕಡತದಲ್ಲಿ ತನಿಖಾ ಸಮಯದಲ್ಲಿ ಏನಾದರೂ ಲೋಪ ದೋಷಗಳು ಇದ್ದು, ಸಾಕ್ಷ್ಯ ಸಂಗ್ರಹಗಳನ್ನು ಬಿಟ್ಟಿದ್ದಲ್ಲಿ ಸರಿಪಡಿಸಬೇಕಾಗಿದ್ದು ನನ್ನ ಜವಾಬ್ದಾರಿ ಎಂದರೆ ಸರಿ.

10. ನನ್ನ ತನಿಖಾ ಸಮಯದಲ್ಲಿ ಆರೋಪಿ ನೀಡಲಾಗಿದ್ದು ಎಂದು ಹೇಳಲಾದ ಗರ್ಭಪಾತದ ಮಾತ್ರೆ ಯಾವ ಕಂಪನಿಯದು, ಯಾರ ಅಂಗಡಿಯಿಂದ ತಂದದ್ದು, ಯಾರು, ಯಾವ ದಿನಾಂಕದಂದು ತಂದಿದ್ದು ಎಂದು ತನಿಖೆ ಮಾಡಿಲ್ಲ.

11. ನಿ.ಪಿ.18 ರ ದಾಖಲೆ original ದಾಖಲೆಯ photo ಕಾಪಿ ಅಲ್ಲ ಎಂದರೆ ಸರಿ. ಸದರಿ ದಾಖಲೆ ಕೈ ಬರವಣಿಗೆಯಿಂದ ಬರೆದುಕೊಟ್ಟ ದಾಖಲೆ ಎಂದರೆ ಸರಿ. ನಿ.ಪಿ.18 ರ ದಾಖಲೆಯಲ್ಲಿ ನಮೂದಾಗಿರುವ ಸಂಗತಿಗಳು ನೈಜ ದಾಖಲೆಯಿಂದ ನಕಲು ಮಾಡಿದ್ದೋ ಇಲ್ಲವೋ ಎಂಬ ಬಗ್ಗೆ ನಾನು ಪರಿಶೀಲಿಸಿಲ್ಲ.

12. ಯಾವುದೇ ಅಧಿಕಾರಿಯು ತನಿಖೆಗೆ ಬೇಕಾಗಿರುವಂತಹ ದಾಖಲಾತಿಗಳನ್ನು ಒದಗಿಸದೇ ಇದ್ದಲ್ಲಿ ಅವರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳಬಹುದು ಎಂದರೆ ಸರಿ.

13. ಈ ಪ್ರಕರಣದಲ್ಲಿ ವೈದ್ಯಾಧಿಕಾರಿ ಡಾಃ ಬಾಲಕೃಷ್ಣರವರ ಕೋರಿಕೆಯ ಮೇರೆಗೆ ನಾನು ಅಂತಹ ಯಾವುದೇ ದಾಖಲೆಗಳನ್ನು ಉದ್ದೇಶಪೂರಕವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ ಹಾಗೂ ವೈದ್ಯರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

14. ಆರೋಪಿಯ ವಿರುದ್ಧ ದೋಷಾರೋಪಣೆ ಸಲ್ಲಿಸಲೇಬೇಕೆಂಬ ಉದ್ದೇಶದಿಂದ ಸರಿಯಾದ ತನಿಖೆ ಕೈಗೊಳ್ಳದೆ ಏಕ ಪಕ್ಷೀಯವಾಗಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-08-12-2025
(ರಾಜೇಶ್ವರಿ ಎನ್ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS